# ಆಹಾ ಸುದ್ದಿ!

★ ಸಸಿತೋಟ



ಇಟಲಿಯ ಈ ಸಂತನ ಮರದ ವಿಗ್ರಹಕ್ಕೆ ಜೀವಂತ ಹಾವುಗಳನ್ನು ಹಾಕಿ ಮೆರವಣಿಗೆಯಲ್ಲಿ ಒಯ್ಯುವ ಸಂಪ್ರದಾಯವಿದೆಯಂತೆ. ನಮ್ಮಲ್ಲಿಯ ಹಾಗೆ ಪ್ರಸಾದ ಕೊಡುವ ಸಂಪ್ರದಾಯವೂ ಇದ್ದಿದ್ದರೆ...!



ಬ್ಯಾಂಕಾಕ್‌ನಲ್ಲಿ ಮೊಲದ ಕೆಫೆ ಆರಂಭವಾಗಿದೆಯಂತೆ. ಮೊಲದ ಜೊತೆ ಕಾಫಿ ಸೇವಿಸುತ್ತ ಆರಾಮವಾಗಿ ಕೂಡ್ರಬಹುದು, ಜಗಳವಾಡುವ ಗೆಳೆಯ/ ಗೆಳತಿಯ ತಾಪತ್ರಯವಿಲ್ಲದೆ.



ವಿಯೆಟ್ನಾಮಿನ ಹನೋಯಿ ಈಗ ಅಕ್ಷರಶಃ ನಿವೃತ್ತರ ಸ್ವರ್ಗ. ನಿವೃತ್ತರು ಪಾರ್ಕ್‌ನಲ್ಲಿ ಮಾತ್ರವಲ್ಲ, ರಸ್ತೆಗಳಲ್ಲೂ ನರ್ತಿಸುತ್ತ ನಿವೃತ್ತಿಯ ನಂತರದ ವೃದ್ಧಾಪ್ಯ, ಒಂಟಿತನದ ನೋವು ಮರೆಯುತ್ತಿದ್ದಾರಂತೆ.

ಅಮೆರಿಕಾದ ನೇವಿ ಅಧಿಕಾರಿ ಜಾನ್ ಜೋಸೆಫ್ ಹಾಗೂ ಆತನ ಪತ್ನಿ 29 ಕಾಮಪ್ರಚೋದಕ ಸಿನಿಮಾಗಳಲ್ಲಿ ನಟಿಸಿದ್ದು ಇಲಾಖೆಗೆ ಗೊತ್ತಾಗಿ ತನಿಖೆ ಆರಂಭಿಸಿದ್ದಾರಂತೆ. ಆದರೆ ಜಾನ್ ಸಿನಿಮಾದಿಂದ ಬಂದ ಹಣದಿಂದ ತನ್ನ ಹಣಕಾಸು ಸಮಸ್ಯೆ ನೀಗಿಸಿಕೊಂಡೆ ಎಂದು ಧೈರ್ಯವಾಗಿ ಹೇಳಿದ್ದಾನಂತೆ. ಇಲಾಖೆ ಅಧಿಕಾರಿಗಳಿಗೆ ವೇತನ ಯಾಕಿಷ್ಟು ಕಡಿಮೆ ಎಂಬುದರ ಬಗ್ಗೆ ತನಿಖೆ ನಡೆಸುವುದು ಒಳಿತು.

ಕೆನ್ಯಾದ ಸುಡಾನ್‌ಗೆ ಗೆಳತಿ ಬೇಕಾಗಿದ್ದಾಳೆ ಎಂದು ಡೇಟಿಂಗ್ ಆ್ಯಪ್ ಟಿಂಡರ್‌ನಲ್ಲಿ ಜಾಹೀರಾತು ನೀಡಲಾಗಿದೆ. ಎತ್ತರ 6 ಅಡಿ, ತೂಕ 5000 ಪೌಂಡ್. ಗೌರವರ್ಣ, ಅಪ್ಪಟ ಸಸ್ಯಾಹಾರಿ. ಆದರೂ ಸುಡಾನ್‌ಗೆ ಗೆಳತಿ ಸಿಕ್ಕಿಲ್ಲ. ಸುಡಾನ್ ಕೆನ್ಯಾದ ಕೊನೆಯ ಬಿಳಿ ಘೇಂಡಾಮೃಗ. ಸದ್ಯ ಬಾಡಿಗೆ ತಾಯಿಯ ಮೂಲಕ ಮರಿ ಪಡೆಯಲು ಹಣ ಸಂಗ್ರಹಿಸಲಾಗುತ್ತಿದೆಯಂತೆ.




ಮೆಕ್ಸಿಕೊ ನಗರದ ಸಮೀಪ ಕತ್ತೆಗಳ ವಾರ್ಷಿಕ ಸಮ್ಮೇಳನ ನಡೆಯುತ್ತದೆಯಂತೆ. ಅತ್ಯುತ್ತಮ ದಿರಿಸು ಸ್ಪರ್ಧೆಯೂ ನಡೆಯಿತು. ಈ ಬಾರಿ ಟ್ರಂಪ್ ಟ್ರೆಂಡ್ ಹೆಚ್ಚಾಗಿತ್ತಂತೆ. ಅಮೆರಿಕ– ಮೆಕ್ಸಿಕೊ ಗಡಿ ಜಗಳ ಕತ್ತೆಗಳವರೆಗೂ ವಿಸ್ತರಿಸಿದೆ.